ಸಾಕ್ಷಿಯನ್ನು ದಿಃ 28.11.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ

1989 ರಿಂದ ವೈದ್ಯ ವೃತ್ತಿ ಮಾಡುತ್ತಿದ್ದೇನೆ. ಅರ್ಜಿದಾರರು ಮೊದಲಿಗೆ ಜೆ.ಎಸ್.ಎಸ್ ಆಸ್ಪತ್ರೆಯಲ್ಲಿ ಸೇರಿದ್ದಾರೆ. ಅರ್ಜಿದಾರರು ಮೊದಲಿಗೆ ಟಿ. ನರಸೀಪುರ ಆಸ್ಪತ್ರೆಗೆ ಹೋಗಿ ಆನಂತರ ಕೆ.ಆರ್ ಆಸ್ಪತ್ರೆಗೆ ಹೋಗಿ ಆನಂತರ ನಮ್ಮ ಆಸ್ಪತ್ರೆಗೆ ಬಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಶಿಕ್ಷಕ ಹಾಗೂ ವೈದ್ಯನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಅರ್ಜಿದಾರರಿಗೆ ಚಿಕಿತ್ಸೆಯನ್ನು ನನ್ನ ಸಹೋದ್ಯೋಗಿ ಕೊಟ್ಟಿದ್ದಾರೆ. ನಾನು ಅರ್ಜಿದಾರರಿಗೆ ಚಿಕಿತ್ಸೆ ಕೊಡದೇ ಇರುವ ಕಾರಣ ಸಾಕ್ಷಿ ನುಡಿಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಹೋದ್ಯೋಗಿಯೊಂದಿಗೆ ಚಿಕಿತ್ಸೆಯ ಬಗ್ಗೆ ಚರ್ಚಿಸಿದ್ದೇನೆ ಎನ್ನುತ್ತಾರೆ. ನಾನು ನಿಪಿ. 12ರ ಪ್ರಕಾರ ಅರ್ಜಿದಾರರಿಗೆ ಚಿಕಿತ್ಸೆ ನೀಡದೆ ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದರೆ ಸಾಕ್ಷಿಯು ನಾನು ಅವರ ನ್ಯೂನತೆಯನ್ನು ನಿರ್ಧರಿಸಿದ್ದೇನೆ ಎನ್ನುತ್ತಾರೆ. ಅರ್ಜಿದಾರರಿಗೆ ಶಸ್ತ್ರ ಚಿಕಿತ್ಸೆಯನ್ನು ನಾನು ಮಾಡಿಲ್ಲ ಎಂದರೆ ಸರಿ. ಚಿಕಿತ್ಸೆ ನೀಡಿದ ಡಾ. ಕಣ್ಣನ್ ವೈದ್ಯರಿಗೆ ಸಾಕ್ಷಿ ನುಡಿಯಲು ತೊಂದರೆ ಇತ್ತಾ ಎಂದರೆ ಅವರು ಕರ್ತವ್ಯದಲ್ಲಿ ನಿರತರಾಗಿದ್ದಾರೆ ಎನ್ನುತ್ತಾರೆ.

2. ಅರ್ಜಿದಾರರಿಗೆ ಮುಂದುವರೆದ ಚಿಕಿತ್ಸೆ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು ಕೊನೆಯದಾಗಿ ದಿಃ 28.06.2025 ರಂದು ಆಸ್ಪತ್ರೆಗೆ ಬಂದಿದ್ದರು. ಆ ಬಗ್ಗೆ ದಾಖಲೆ ಕೊಡಲು ತೊಂದರೆ ಇಲ್ಲ. ಅರ್ಜಿದಾರರಿಗೆ ದಿಃ 18.10.2024 ರಂದು ಕೊನೆಯದಾಗಿ ಚಿಕಿತ್ಸೆ ನೀಡಿದ್ದೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆದಾದ ನಂತರ ಇತ್ತೀಚೆಗೆ ಬಂದಿದ್ದಾರೆ ಎನ್ನುತ್ತಾರೆ. ಅರ್ಜಿದಾರರಿಗೆ ಶೇಕಡಾ 43 ರಷ್ಟು ನ್ಯೂನತೆಯನ್ನು ನಾವು ನಿರ್ಧರಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಕೈ ಮತ್ತು ಎದೆಯ ಭಾಗಕ್ಕೆ ಪೆಟ್ಟಾಗಿತ್ತು ಎಂದರೆ ಸರಿ. ಆದ ಕಾರಣ ಪೂರ್ತಿ ಶರೀರಕ್ಕೆ ಶೇಕಡಾ 43 ರಷ್ಟು ನ್ಯೂನತೆ ಆಗಿದೆ ಎಂದು ಸುಳ್ಳಾಗಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ನಮೂದಿಸಿರುವಂತೆ ನ್ಯೂನತೆಯನ್ನು

ಲೆಕ್ಕಾಚಾರ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು ಗುಣಮುಖ ಆಗಿ ಬಿಡುಗಡೆಯಾದ ನಂತರ ನಾವು ಅರ್ಜಿದಾರರಿಗೆ ಯಾವುದೇ ಚಿಕಿತ್ಸೆ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ. 13 ರ ಪ್ರಕಾರ ಅರ್ಜಿದಾರರು ಸ್ಟೇಬಲ್ ಇದ್ದ ಕಾರಣ ಬಿಡುಗಡೆಗೊಳಿಸಿದ್ದೇವೆ ಎಂದರೆ ಸರಿ. ದಿಃ 27.03.2024 ರಂದು ನಮ್ಮ ಆಸ್ಪತ್ರೆಯಲ್ಲಿ ಮೊದಲ ಬಾರಿಗೆ ಬಂದಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಿಃ 28.04.2024 ರಂದು ಬಂದಿರುತ್ತಾರೆ ಎನ್ನುತ್ತಾರೆ. ಆನಂತರ ಪುನಃ ದಿಃ 17.10.2024 ರಂದು ಬಂದಿದ್ದಾರೆ ಎಂದರೆ ಸರಿ. ಆ ದಿನ ಯಾವುದೇ ಚಿಕಿತ್ಸೆ ನೀಡದೇ ಮರುದಿನ ಬಿಡುಗಡೆಗೊಳಿಸಿದ್ದೇವೆ ಎಂದರೆ ಇಂಪ್ಲಾಟ್ಸ್ ರೀಮೂವ್ ಮಾಡಿದ್ದೇವೆ ಎನ್ನುತ್ತಾರೆ.

3. ಅರ್ಜಿದಾರರ ಕೆಲಸದ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ. ಅರ್ಜಿದಾರರು ನಮ್ಮಲ್ಲಿ ಬಿ.ಇ. ಕಲಿಯುತ್ತಿದ್ದು ಟೈಲರಿಂಗ್ ಎಂದು ಹೇಳಿರುತ್ತಾರೆ. ಅರ್ಜಿದಾರರಿಗೆ ಗುಣಮುಖವಾದ ಕಾರಣ ಪ್ರಸ್ತುತ ಕೆಲಸ ಮಾಡಲು ತೊಂದರೆ ಇಲ್ಲ ಎಂದರೆ ಬಲಗೈ ನಲ್ಲಿ ಕೆಲಸ ಮಾಡಲು ಆಗುವುದಿಲ್ಲ ಎನ್ನುತ್ತಾರೆ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾಖಲೆಗಳನ್ನು ಸೃಷ್ಠಿಸಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.